ಫ್ರಾಸಾ-2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ

ದಿನಾಂಕಃ **20-09-2024**

ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

5. ನಂತರ ಪಿಐ ರವರು ಆರೋಪಿತನು ಧರಿಸಿದ ಶರ್ಟನ ಬದಲಿ ವ್ಯವಸ್ಥೆ ಮಾಡಿ ಆರೋಪಿ ಧರಿಸಿದ ಶರ್ಟನ ಎಡ ಜೇಬಿನ ಒಳಪದರನ್ನು ಶ್ರೀನಿವಾಸ ಹೆಚ್.ಸಿ. ಅವರಿಂದ ಸೋಡಿಯಂ ಕಾರ್ಬೋನೇಟ ದ್ರಾವಣದಲ್ಲಿ ತೋಳೆದಾಗ ಸದರಿ ಭಾಗ ತಿಳಿ ಗುಲಾಬಿ ಬಣಕ್ಕೆ ತಿರುಗಿತು ಸದರಿ ದ್ರಾವಣವನ್ನು ಎರಡು ಸಮಬಾಗ ಮಾಡಿ ಗಾಜಿನ ಬಾಟಲಿಯಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಿ ಬಾಟಲಿ ಬಾಯಿ ಮುಚ್ಚಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಜೆ.ಬಿ. ಎಂಬ ಮೋಹರನ್ನು ಹಾಕಿ ಅದಕ್ಕೆ ಆರ್ಟಿಕಲ್-7, 7(ಎ) ಎಂದು ಗುರುತಿಸಲಾಯಿತು ಸದರಿ ಆರ್ಟಿಕಲ್‌ಗಳನ್ನು ಈಗಾಗಲೇ ಮು.ಮಾ.12 ಮತ್ತು 13 ಎಂದು ಗುರುತಿಸಲಾಗಿದೆ. ಆರೋಪಿ ಧರಿಸಿದ ಶರ್ಟನ್ನು ಪಡೆದು ಅದನ್ನು ಸೀಲ್ ಮಾಡಿ ಅದನ್ನು ಆರ್ಟಿಕಲ್-೮ ಎಂದು ಗುರುತಿಸಲಾಯಿತು. ಸದರಿ ಶರ್ಟನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.14 ಎಂದು ಗುರುತಿಸಲಾಗಿದೆ. ಫಿರ್ಯಾದಿಯ ಬಳಿ ಇದ್ದ ಧ್ವನಿ ಸುರುಳಿಯನ್ನು ಲ್ಯಾಪಟಾಪಗೆ ಹಾಕಿಸಿ ಪಂಚರ ಸಮಕ್ಷಮ ಕೇಳಿಸಲಾಯಿತು. ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಆ ಸಿ.ಡಿ.ಯನ್ನು ಸೀಲ್ ಮಾಡಿದರು ಸದರಿ ಸಿ.ಡಿ. ಆರ್ಟಿಕಲ್-೨ ಎಂದು ಗುರುತಿಸಲಾಯಿತು. ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ. ನಂತರ ಫಿರ್ಯಾದಿದಾರನ್ನು ಟ್ರ್ಯಾಪ ಕಾಲಕ್ಕೆ ಮುಂಚೆ ಮತ್ತು ಟ್ರ್ಯಾಪ ಕಾಲಕ್ಕೆ ಸಂಗ್ರಹಿಸಿದ ಆರೋಪಿಯ ಧ್ವನಿ ಯನ್ನು ಕೇಳಿಸಿ ಆತನ ಮೇಲಾಧಿಕಾರಿಯಾದ ನರೇಶ ಕುಮಾರ ಶಿರೇಸ್ತೆದಾರ ತಹಶೀಲ್ದಾರ ಕಛೇರಿ ಸುರಪೂರ ಅವರಿಂದ ಆರೋಪಿಯ ಧ್ವನಿಯನ್ನು ಗುರುತಿಸಲಾಯಿತು. ಆರೋಪಿಯ ದಸ್ತಗಿರಿ ಬಗ್ಗೆ ನರೇಶ ಕುಮಾರ ಅವರಿಗೆ ನೋಟಸನ್ನು ಕೊಟ್ಟರು.

6. ನಂತರ ಆರೋಪಿ ಸ್ವರಕ್ಷಣ ಹೇಳಿಕೆಯನ್ನು ಕೈಯಲ್ಲಿ ಬರೆದುಕೊಟ್ಟ ಅದನ್ನು ಈಗಾಗಲೇ ನಿ.ಪಿ.20 ಎಂದು ಗುರುತಿಸಲಾಗಿದೆ. ಯಾರೋ ನನ್ನ ವಿರುದ್ಧ ದ್ವೇಶದಿಂದ ದಿಃ 24.02.2014 ರಂದು 2000/- ರೂಪಾಯಿ ತೆಗೆದುಕೊಂಡಿದ್ದು ನಿಜವಿರುತ್ತದೆ ಎಂದು ಬರೆದಿರುತ್ತಾನೆ. ದಿಃ 2೮.02.2015 ರಂದು ಹಣ ಕೊಡಲಾಯಿತು. ಫಿರ್ಯಾದಿ ಮತ್ತು ನನ್ನನ್ನು ಪಿಐ ವಿಚಾರ ಮಾಡಿದಾಗ ಸದರಿ ಹಣ ಲಂಚದ ಹಣ ಆಗಿತ್ತು ಎಂದು ಫಿರ್ಯಾದಿ ಮತ್ತು ನಾನು ಹೇಳಿರುತ್ತೇವೆ. ಜೆ.ಬಿ. ಸೀಲನ್ನು ಪಂಚ ಸಾಕ್ಷಿ ಪ್ರವಿಣಕುಮಾರ ಅವರ ತಾಬಾಕ್ಕೆ ಕೊಟ್ಟು ಸದರಿ ಸೀಲು ನ್ಯಾಯಾಧೀಶರು ಅಥವಾ ವಿಚಾರಣ ಅಧಿಕಾರಿ ಕೇಳಿದಾಗ ಮಾತ್ರ ಹಾಜರಪಡಿಸುವಂತೆ ಹೇಳಿ ಆ ಬಗ್ಗೆ ರಸೀದಿ ಪಡೆದುಕೊಂಡರು. ಈ ಎಲ್ಲ ಪ್ರಕ್ರಿಯೇಯನ್ನು ಸೈಯದ ಸಫಿಯುದ್ದಿನ ಅವರಿಂದ ಫೋಟೊ ತೆಗೆಸಿ ವೀಡಿಯೋ ಮಾಡಿಸಿದರು ಸದರಿ ಫೋಟೊಗಳು ಈಗಾಗಲೇ

ನಿ.ಪಿ.22 ರಿಂದ 27 ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 3-30 ರಿಂದ ಸಂಜೆ 7-30 ರ ವರೆಗೆ ಪಂಚರ ಸಮಕ್ಷಮ ಫಿರ್ಯಾದಿ ಹೇಳಿದಂತೆ ತಯಾರಿಸಲಾಯಿತು. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.21 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.21(ಬಿ) ಎಂದು ಗುರುತಿಸಲಾಯಿತು.

7. ದಿಃ 01.03.2015 ರಂದು ಮರು ಹೇಳಿಕೆಯನ್ನು ಪಡೆದುಕೊಂಡರು. ದಿಃ 03.03.2015 ರಂದು ನಾನು, ಫಿರ್ಯಾದಿ ಮತ್ತು ಇನ್ನೊಬ್ಬ ಪಂಚರ ಲೋಕಾಯುಕ್ತ ಠಾಣೆಗೆ ಹಾಜರಾದೆವು. ಅಲ್ಲಿ ಇದ್ದ ಲೋಕೋಪಯೋಗಿ ಇಲಾಖೆಯ ಎ.ಇ. ಮೋಹನ ದೇಶಮುಖ ಇವರನ್ನು ಪರಿಚಯ ಮಾಡಿಸಿದರು. ನಂತರ ಪಿಐ ರವರ ನಿರ್ದೇಶದ ಮೇರೆಗೆ ಅವರ ಜೊತೆ ಸುರಪೂರ ಪಟ್ಟಣಕ್ಕೆ ಹೋಗಿ ಘಟನಾ ಸ್ಥಳ ತೋರಿಸಿರುತ್ತೇನೆ. ಅಲ್ಲಿ ಎ.ಇ. ಅವರು ನಕ್ಷೆ ತಯಾರಿಸಿರುತ್ತಾರೆ. ಸದರಿ ನಕ್ಷೆಯನ್ನು ನಿ.ಪಿ.30 ಎಂದು ಗುರುತಿಸಲಾಯಿತು. ಪೊಲೀಸರು ತಯಾರಿಸಿದ ನಕ್ಷೆಯನ್ನು ನಿ.ಪಿ.31 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆಗಳನ್ನು ಕೊಟ್ಟಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ</u>

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.